ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

ಸಿ.ಸಿ.ನಂ.373/2023

ಚಾಸಾ: 5 ಪ್ರಾಸಾ:2

ದಿನಾಂಕಃ 08.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು– | ಮೋಹನ್ |
| ತಂದೆಯ ಹೆಸರು– | ಸತ್ಯ ಕುಮಾರ್ |
| ವಯಸ್ಸು – | 48 ವರ್ಷ |
| ಉದ್ಯೋಗ– | ಇಂಜಿನಿಯರ್ |
| ವಾಸ– | ಕೆಜಿಎಫ್ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

1. ನನಗೆ ಆರೋಪಿಯ ಪರಿಚಯ ಇರುವುದಿಲ್ಲ. ದಿನಾಂಕ **06.03.2019** ರಂದು ನಾನು ವಿದ್ಯುತ್ ನಿರಾಕ್ಷೇಪಣಾ ಪತ್ರಕ್ಕಾಗಿ ಕೆಜಿಎಫ್ ನಗರ ಸಭೆಗೆ ಒಂದು ಅರ್ಜಿ ಸಲ್ಲಿಸಿದ್ದೆ ಆದರೆ ಸದರಿ ಅರ್ಜಿಯ ಮೇಲೆ ನನಗೆ ನಗರ ಸಭೆಯವರು ಯಾವುದೇ ವಿದ್ಯುತ್ ನಿರಾಕ್ಷೇಪಣಾ ಪತ್ರವನ್ನು ನೀಡಿರುವುದಿಲ್ಲ. ನಂತರ **2019** ರಲ್ಲಿ ನನಗೆ ಯಾರೋ ಒಬ್ಬರು ನನ್ನ ಹೆಸರಿನಲ್ಲಿ ದಾಖಲೆಗಳನ್ನು ಸೃಷ್ಟಿಸಿ ಕೆಜಿಎಫ್ ನಗರ ಸಭೆಯಲ್ಲಿ ಮೋಸ ಮಾಡಿರುತ್ತಾರೆ ಎಂದು ನನಗೆ ಗೊತ್ತಾಯಿತು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

2. ಈಗ ನನಗೆ ತೋರಿಸಿದ ದಾಖಲೆಯು ನಾನು ವಿದ್ಯುತ್ ನಿರಾಕ್ಷೇಪಣಾ ಪತ್ರಕ್ಕಾಗಿ ಕೆಜಿಎಫ್ ನಗರ ಸಭೆಗೆ ಸಲ್ಲಿಸಿದ ಅರ್ಜಿಯ ನಕಲು ಆಗಿದ್ದು ಅದನ್ನು ನಿಪಿ–**1** ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ–**1**(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃಮಾನ್ಯ ಎಪಿಪಿ ರವರಿಂದಃ**

3. ದಿನಾಂಕ 09.07.2019 ರಂದು ನಾನು ಪೋಲೀಸರ ಮುಂದೆ ಆರೋಪಿಯು ನನ್ನ ಹೆಸರಿನಲ್ಲಿ ವಿದ್ಯುತ್ ನಿರಾಕ್ಷೇಪಣಾ ಪತ್ವನ್ನು ಸೃಷ್ಟಿಸಿ ಅದರ ಮೇಲೆ ಚಾಸಾ–**1** ರವರ ನಕಲಿ ಸಹಿಯನ್ನು ಮಾಡಿ ಕೆಜಿಎಫ್ ನಗರ ಸಭೆಗೆ ಮೋಸ ಮಾಡಿರುತ್ತಾರೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಈಗ ನಿಪಿ–**2** ಎಂದು ಗುರುತಿಸಲಾಯಿತು. ನಿಪಿ–2

ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಆರ್.ಜೆ.ಬಿ. ವಕೀಲರುಗಳಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

## ಸಿ.ಸಿ.ನಂ.373/2023

ಚಾಸಾ: 1 ಪ್ರಾಸಾ:1

ದಿನಾಂಕಃ 08.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು– | ಆರ್. ಶ್ರೀಕಾಂತ್ |
| ತಂದೆಯ ಹೆಸರು– | ಎ. ಎಲ್. ರಾಮರಾವ್ |
| ವಯಸ್ಸು – | 59 ವರ್ಷ |
| ಉದ್ಯೋಗ– | ಕಮ್ಯೂನಿಟಿ ಅಫೇರ್ಸ್ ಆಫೀಸರ್, ಸ್ಕಿಲ್ ಡೆವಲಪ್ ಮೆಂಟ್ ಡಿಪಾರ್ಟ್ ಮೆಂಟ್, ಪುರಸಭೆ, ಬಂಗಾರಪೇಟೆ |
| ವಾಸ– | ಕೋಲಾರ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

1. ನಾನು ನವೆಂಬರ್ 2016 ರಿಂದ ಆಗಸ್ಟ್ 2019 ರವರೆಗೆ ಕೆಜಿಎಫ್ ನಗರ ಸಭೆಯಲ್ಲಿ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನನಗೆ ಆರೋಪಿಯ ಪರಿಚಯ ಇರುತ್ತದೆ. ದಿನಾಂಕ 10.06.2019 ರಂದು ಬೆಳಿಗ್ಗೆ 9.30 ಗಂಟೆಗೆ ನಾನು ಕಚೇರಿಗೆ ಬರುವಾಗ ನಮ್ಮ ನಗರ ಸಭೆಯ ಕಚೇರಿಯ ಆವರಣದಲ್ಲಿರುವ ಅಂಬೇಡ್ಕರ್ ಪುತಳಿಯ ಹತ್ತಿರ ಆರೋಪಿಯು ಕೆಲವು ದಾಖಲೆಗಳನ್ನು ತನ್ನ ಹತ್ತಿರ ಇಟ್ಟುಕೊಂಡು ನಿಂತಿದ್ದರು. ಆಗ ನಾನು ಆರೋಪಿಗೆ ಯಾಕೆ ಅಲ್ಲಿ ನಿಂತಿದ್ದೀಯ ಮತ್ತು ನಿನ್ನ ಹತ್ತಿರ ಏನು ದಾಖಲೆಗಳು ಇವೆ ಎಂದು ಪ್ರಶ್ನಿಸಿದಾಗ ಆತನು ಗಾಬರಿಯಾಗಿ ಸ್ಥಳದಿಂದ ಓಡಿ ಹೋಗಲು ಪ್ರಯತ್ನಿಸುತ್ತಾನೆ. ಆದರೆ ಆಗ ನಾನು ಆರೋಪಿಯ ವಶದಲ್ಲಿದ್ದ ದಾಖಲೆಗಳನ್ನು ಕಿತ್ತುಕೊಂಡು ಪರಿಶೀಲಿಸಿದಾಗ ಹಿಂದೆ ದಿನಾಂಕ 19.03.2019 ರಂದು ನಾನು ಚಾಸಾ–5 ರವರಿಗೆ ನನ್ನ ಸಹಿ ಮಾಡಿ ಒಂದು ವಿದ್ಯುತ್ ನಿರಾಕ್ಷೇಪಣಾ ಪತ್ರವನ್ನು ಕೊಟ್ಟಿದ್ದು ಅದರಲ್ಲಿ ಸ್ವತ್ತಿನ ಖಾತೆ ಸಂಖ್ಯೆ 301/2 ಅಳತೆ 229/515 ಚದುರ ಮೀಟರ್ ಎಂದು ನಮೂದಿಸಿ ಚೆಕ್ಕುಬಂದಿಯನ್ನು ನಮೂದಿಸಲಾಗಿತ್ತು ಆದರೆ ಸದರಿ ದಾಖಲೆಯನ್ನು ಆಧಾರವಾಗಿ ಇಟ್ಟುಕೊಂಡು ಚಾಸಾ–5 ರವರ ಹೆಸರಿನಲ್ಲಿ ನಕಲಿ ವಿದ್ಯುತ್ ನಿರಾಕ್ಷೇಪಣಾ ಪತ್ರವನ್ನು ತಯಾರಿಸಿ ಅದರಲ್ಲಿ ಸ್ವತ್ತಿನ ಖಾತೆ ಸಂಖ್ಯೆ 301/2 ರ ಅಳತೆಯನ್ನು ತಿದ್ದುಪಡಿ ಮಾಡಿ 278/770 ಚದುರ ಮೀಟರ್ ಎಂದು ನಮೂದಿಸಿ ಚೆಕ್ಕುಬಂದಿಯಲ್ಲಿಯೂ ಸಹ ಬದಲಾವಣೆ ಮಾಡಿ ನನ್ನ ನಕಲಿ ಸಹಿ ಮಾಡಿ ಆರೋಪಿಯು ತನ್ನ ವಶದಲ್ಲಿ ಇಟ್ಟುಕೊಂಡಿದ್ದನು ಎಂದು ನನಗೆ ಗೊತ್ತಾಯಿತು. ಆಗ ನಾನು ಸದರಿ ದಾಖಲೆಯ ಆಧಾರದ ಮೇಲೆ ನಮ್ಮ ಕಚೇರಿಯಲ್ಲಿದ್ದ ದಾಖಲೆಗಳನ್ನು ಪರಿಶೀಲಿಸಿ

ನಂತರ ದಿನಾಂಕ 09.07.2019 ರಂದು ಆರೋಪಿಯ ವಿರುದ್ಧ ಆರ್ ಪೇಟೆ ಪೋಲೀಸ್ ಠಾಣೆ ಯಲ್ಲಿ ದೂರು ದಾಖಲಿಸಿರುತ್ತೇನೆ.

3. ನಂತರ ಅದೇ ದಿನ ಅಂದರೆ ದಿನಾಂಕ 09.07.2019 ರಂದು ಪೋಲೀಸರು ನಮ್ಮ ಕಚೇರಿಗೆ ಬಂದು ನಾವು ತೋರಿಸಿದ ಸ್ಥಳವನ್ನು ಪರಿಶೀಲಿಸಿ ಸ್ಥಳ ಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಂತರ ದಿನ ಒಂದು ದಿನ ಪೋಲೀಸರು ನನಗೆ ಒಂದು ಮನವಿ ಪತ್ರ ಸಲ್ಲಿಸಿ ದಾಖಲೆಗಳನ್ನು ಹಾಜರುಪಡಿಸಲು ಹೇಳಿದ ಮೇರೆಗೆ ನಾನು ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪೋಲೀಸರಿಗೆ ಕೊಟ್ಟಿರುತ್ತೇನೆ.

4. ನಂತರ ಒಂದು ದಿನ ಪೋಲೀಸರು ಪುನಃ ನಮ್ಮ ಕಚೇರಿಗೆ ಬಂದು ಎಫ್.ಎಸ್.ಎಲ್ ಪರೀಕ್ಷೆಗಾಗಿ ನನ್ನ ಮಾದರಿ ಸಹಿಗಳ ಅವಶ್ಯಕತೆ ಇರುತ್ತದೆ ಎಂದು ಹೇಳಿ ನನ್ನ ಮಾದರಿ ಸಹಿಗಳನ್ನು ಪಡೆದುಕೊಂಡು ಹೋಗಿರುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿರುವುದರಿಂದ ವಿಚಾರಣೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್